ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 98-103
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೂರನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಬ್ರಿಟಿಷರಿಂದ ಸಾವನದುರ್ಗ ಕೋಟೆಯ ಮುತ್ತಿಗೆ–1791: ಒಂದು ಚಾರಿತ್ರಿಕ ವಿಶ್ಲೇಷಣೆ

**ವಸಂತ ಹೆಚ್.ಜಿ[1] ಮತ್ತು ಡಾ. ಶಶಿಧರ್ ಎಂ[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು
ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

***Abstract:***
*ಮೂರನೇ ಆಂಗ್ಲೋ ಮೈಸೂರು ಕದನ ಸಂದರ್ಭದಲ್ಲಿ ಬ್ರಿಟಿಷರು ಮೈಸೂರು ರಾಜ್ಯವನ್ನು ಕಬಳಿಸಲು ಹವಣಿಸಿದರು. ಇದರನ್ವಯ ಮೈಸೂರು ರಾಜ್ಯದ ರಾಜಧಾನಿಯಾದ ಶ್ರೀರಂಗಪಟ್ಟಣದ ಮುತ್ತಿಗೆಗೆ ಬ್ರಿಟಿಷರು ಬೇಕಾದ ಸಕಲ ಸಿದ್ಧತೆಗಳನ್ನು ಮಾಡಿಕೊಂಡರು. ಬೆಂಗಳೂರಿನ ಬಾರಾಮಹಲ್ ಅನ್ನು ಗೆದ್ದು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಲು ಮುನ್ನುಗ್ಗಿದರು ಬೆಂಗಳೂರುನಿಂದ ಶ್ರೀರಂಗಪಟ್ಟಣಕ್ಕೆ ಹೋಗುವ ದಾರಿಯಲ್ಲಿ ಟಿಪ್ಪುವಿನ ರಕ್ಷಣಾ ಕೋಟೆಯಾದ ಸಾವನದುರ್ಗ ಮತ್ತು ಉತ್ತರಿದುರ್ಗವನ್ನು ಗೆಲ್ಲಬೇಕಾದ ಅನಿವಾರ್ಯವಿತ್ತು. ಆದುದರಿಂದ 1791 ಡಿಸೆಂಬರ್ 10 ರಂದು ಲಾರ್ಡ್ ಕಾರ್ನವಾಲೀಸ್ ನೇತೃತ್ವದಲ್ಲಿ ಬ್ರಿಟಿಷರು ಸಾವನದುರ್ಗವನ್ನು ಮುತ್ತಿಗೆ ಹಾಕಲು ಆರಂಭಿಸಿದರು. ಸಾವನದುರ್ಗ ಕೋಟೆಯು ದಟ್ಟವಾದ ಅರಣ್ಯದಿಂದ ಕೂಡಿತ್ತು ಬೆಟ್ಟದ ಸುತ್ತಲೂ ಬಿದಿರಿಗಳಿಂದ ರಕ್ಷಣೆಯನ್ನು ಹೊಂದಿತ್ತು. ಡಿಸೆಂಬರ್ 10 ರಂದು ಲಾರ್ಡ್ ಸ್ಟುವರ್ಟ್ ಜೊತೆಗೆ ಬ್ರಿಟಿಷ್ ಸೈನ್ಯ ಸಾವನದುರ್ಗ ಬೆಟ್ಟದ ಕಡೆಗೆ ಸಾಗಿತ್ತು. 1791 ಡಿಸೆಂಬರ್ 21ರ ಬೆಳಗ್ಗೆ 11 ಗಂಟೆಗೆ ಫಿರಂಗಿದಳ ಸಾವನದುರ್ಗದ ಕೋಟೆಯ ಗೋಡೆಗಳ ಮೇಲೆ ಗುಂಡಿನ ದಾಳಿ ನಡೆಸಿ ಕೋಟೆ ಗೋಡೆಯನ್ನು ಕೆಡವಿದರು. ಇದರಿಂದ ಟಿಪ್ಪುವಿನ ಸೈನಿಕರು ದಿಕ್ಕಪಾಲಾಗಿ ಓಡಿದರು. ಕೋಟೆಯ ಸುತ್ತ ಬ್ರಿಟಿಷ್ ಸೈನ್ಯ ನಾಲ್ಕು ಕಡೆಯಿಂದ ಸುತ್ತುವರೆದು ಕೋಟೆಯ ರಕ್ಷಣೆ ಜವಾಬ್ದಾರಿ ಹೊತ್ತಿದ್ದ ಟಿಪ್ಪುವಿನ ಸೈನ್ಯದ ಮುಖ್ಯಸ್ಥ ಕಿಲ್ಲೇದಾರನನ್ನು ಕೊಂದು. ಸಾವನದುರ್ಗ ಕೋಟೆಯನ್ನು ಬ್ರಿಟಿಷರು ಒಂದು ಗಂಟೆ ಅವಧಿಯಲ್ಲೆ ವಶಪಡಿಸಿಕೊಂಡರು. ಈ ಮುತ್ತಿಗೆಯಲ್ಲಿ ಒಬ್ಬ ಬ್ರಿಟಿಷ್ ಅಧಿಕಾರಿ ಕೂಡ ಸಾವನ್ನಪ್ಪಿಲ್ಲವೆಂದು ವರದಿ ಮಾಡಿದೆ. ಹೀಗೆ ಸಾವನದುರ್ಗ ಕೋಟೆ ಬ್ರಿಟಿಷರ ವಶವಾಯಿತು.*

**Keywords:** *ಬ್ರಿಟಿಷ್ ಆಳ್ವಿಕೆ, ಟಿಪ್ಪು ಸುಲ್ತಾನ್, ಸಾವನದುರ್ಗ ಕೋಟೆ, ಮೂರನೇ ಆಂಗ್ಲೋ–ಮೈಸೂರು ಯುದ್ಧ*

## ಪೀಠಿಕೆ

ದಕ್ಷಿಣ ಭಾರತವನ್ನು ಗೆಲ್ಲುವ ಸಲುವಾಗಿ ಬ್ರಿಟಿಷನವರು ಬಲಿಷ್ಠವಾದ ಮೈಸೂರು ರಾಜ್ಯವನ್ನು ಸೋಲಿಸಲು ತಮ್ಮ ಪ್ರಯತ್ನ ಮಾಡಿದರು. ಅದರಂತೆ ಒಂದು ಮತ್ತು ಎರಡನೆಯ ಆಂಗ್ಲೋ–ಮೈಸೂರು ಕದನಗಳು ನಡೆದವು. ಇದರಲ್ಲಿ ಹೈದರಾಲಿ ಬ್ರಿಟಿಷರಿಗೆ ಸಿಂಹ ಸ್ವಪ್ನವಾಗಿ ಕಾಡಿದ ಆದರೆ ಅನಾರೋಗ್ಯದಿಂದ ಸಾವನಪ್ಪಿದ. ಮುಂದೆ ಬ್ರಿಟಿಷರನ್ನು ಸೋಲಿಸುವ ಪ್ರಯತ್ನದಲ್ಲಿ ಟಿಪ್ಪುವಿನ

***Please cite this article as:*** ವಸಂತ, ಹೆಚ್.ಜಿ ಮತ್ತು ಶಶಿಧರ್ ಎಂ. (2026). ಮೂರನೇ ಆಂಗ್ಲೋ– ಮೈಸೂರು ಯುದ್ಧದಲ್ಲಿ ಬ್ರಿಟಿಷರಿಂದ ಸಾವನದುರ್ಗ ಕೋಟೆಯ ಮುತ್ತಿಗೆ–1791: ಒಂದು ಚಾರಿತ್ರಿಕ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 5(2), 98–103

ಹೋರಾಟ ಮುಂದುವರೆದಿತ್ತು. ಅದೇ ರೀತಿ ಮೈಸೂರು ರಾಜ್ಯವನ್ನು ಗೆಲ್ಲಲು ಬ್ರಿಟಿಷರು ರಣತಂತ್ರದ ಹಾದಿಯನ್ನು ಆರಂಭಿಸಿದರು. ಅದುವೇ ಮೂರನೇ ಆಂಗ್ಲೋ–ಮೈಸೂರು ಕದನ. ಪ್ರಾರಂಭದಲ್ಲೇ ಕೋರಮಂಡಲದಿಂದ – ಬೆಂಗಳೂರಿನವರೆಗೆ ಟಿಪ್ಪುವಿನ ಆಡಳಿತಕ್ಕೆ ಒಳಪಟ್ಟ ಎಲ್ಲಾ ಸ್ಥಳಗಳನ್ನು ಜಯಿಸಿದರು. ಇನ್ನು ಬೆಂಗಳೂರುನಿಂದ ಶ್ರೀರಂಗಪಟ್ಟಣದವರೆಗೆ ಮಾತ್ರ ಗೆಲ್ಲಬೇಕಾಗಿತ್ತು. ಬಾರಮಹಲ್ ಅಕ್ರಮಣದ ನಂತರ 1791ರಲ್ಲಿ ಬೆಂಗಳೂರಿನಿಂದ ಶ್ರೀರಂಗಪಟ್ಟಣದವರೆಗೆ ಮಧ್ಯದಲ್ಲಿ ಸಿಗುವ ಟಿಪ್ಪುವಿನ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳನ್ನು ಕೂಡ ಬ್ರಿಟಿಷರು ಗೆಲ್ಲಬೇಕಾಗಿತ್ತು. ಅದರಲ್ಲಿ ಪ್ರಮುಖವಾಗಿ ಸಾವನದುರ್ಗದ ಕೋಟೆಯು ಒಂದು. ಈ ಕೋಟೆ ಬಲಿಷ್ಠವಾದ ಸೈನ್ಯ ಸ್ಥಳವಾಗಿತ್ತು. ಲಾರ್ಡ್ ಕಾರ್ನ್‌ವಾಲೀಸ್ ಸಾವನದುರ್ಗವನ್ನು ಸೋಲಿಸಲು ಅಷ್ಟು ಸುಲಭವಲ್ಲವೆಂದು ಅರಿತಿದ್ದನು, ಕಾರಣ ಬೃಹತಾಕಾರದ ಬೆಟ್ಟದ ಕೋಟೆಯಾಗಿದ್ದು ಅದರ ಸುತ್ತಲೂ ಕಾಡಿನಿಂದ ಆವರಿಸಿತ್ತು. ಈ ಕೋಟೆಯನ್ನು ಯೋಜಿತವಾಗಿ ಸೋಲಿಸಬೇಕೆಂದು ಪಣತೊಟ್ಟಿದನು.

**ಸಂಶೋಧನಾ ವಿಧಾನಗಳು**

ಈ ಲೇಖನವನ್ನು ಸಿದ್ದಪಡಿಸಲು ಪ್ರಾಥಮಿಕ ಆಕರಗಳು ಮತ್ತು ದ್ವಿತೀಯ ಆಕರಗಳನ್ನು ಬಳಸಲಾಗಿದೆ. ಹಾಗೆಯೇ ಕ್ಷೇತ್ರ ವೀಕ್ಷಣೆ ಕಾರ್ಯವನ್ನು ಕೈಗೊಂಡು ಮಾಹಿತಿ ಸಂಗ್ರಹಿಸಿ ಈ ಲೇಖವನ್ನು ಸಿದ್ದಪಡಿಸಲಾಗಿದೆ. ಬ್ರಿಟಿಷರ ಸೈನ್ಯದ ಕಾರ್ಯತಂತ್ರ, ಟಿಪ್ಪುವಿನ ಸೈನ್ಯದ ವಿರುದ್ಧ ಹೋರಾಟದ ಬಗ್ಗೆ ತಿಳಿದುಕೊಳ್ಳುವ ಉದ್ದೇಶದಿಂದ ಈ ಲೇಖನ ಸಿದ್ಧಪಡಿಸಲಾಗಿದೆ.

**ಸಾವನದುರ್ಗ ಕೋಟೆಯ ಭೌಗೋಳಿಕ ಸ್ವರೂಪ**

ಬೆಂಗಳೂರಿನಿಂದ ದಕ್ಷಿಣಕ್ಕೆ 19 ಮೈಲಿ ದೂರದಲ್ಲಿರುವ ಸಾವನದುರ್ಗದ ಕೋಟೆಯು ಸಮುದ್ರ ಮಟ್ಟಕ್ಕಿಂತ 4024 ಅಡಿಗಳಷ್ಟು ಎತ್ತರವಿರುವ ಕೋಟೆಯಾಗಿದೆ ಕೋಟೆಯ ಸುತ್ತಲೂ ದಟ್ಟವಾದ ಕಾಡು, ಬಿದಿರುಗಳಿಂದ ಆವರಿಸಿದೆ ಇದರ ಸುತ್ತಳತೆ ಸುಮಾರು 8 ರಿಂದ 10 ಮೈಲಿ ಸುತ್ತಳತೆಯನ್ನು ಹೊಂದಿದೆ.[1] ಈ ಬೆಟ್ಟವು ಬುಡದಿಂದ ಲಂಬವಾಗಿ ಅರ್ಧ ಮೈಲಿಗಿಂತ ಹೆಚ್ಚು ಉತ್ತರಕ್ಕೆ ಏರುವ ವಿಶಾಲವಾದ ಬಂಡೆಯ ಪರ್ವತವಾಗಿದೆ. ಇದು ಸಂಪೂರ್ಣವಾಗಿ ಕೃತಕ ಗೋಡೆಗಳಿಂದ ಸುತ್ತುವರೆದಿದ್ದು. ಅಡ್ಡಗೋಡೆಗಳು, ತಡೆಗೋಡೆಗಳಿಂದ ರಕ್ಷಿಸಲ್ಪಟ್ಟಿದೆ. ಈ ಕೋಟೆಯಲ್ಲಿ ವಿಶಾಲವಾದ ಕಂದಕವಿರುವುದರಿಂದ ಎರಡು ಬೆಟ್ಟಗಳಾಗಿ ವಿಭಜಿತವಾಗಿದೆ. ಈ ಎರಡು ಬೆಟ್ಟಗಳನ್ನು ಕರಿಬೆಟ್ಟ ಮತ್ತು ಬಿಳಿಬೆಟ್ಟ ಎಂದು ಗುರುತಿಸಬಹುದಾಗಿದೆ. ಇವೆರಡು ಸ್ವತಂತ್ರವಾಗಿ ಬೇರ್ಪಟ್ಟಿದೆ ಇವುಗಳಲ್ಲಿ ತನ್ನದೇ ಆದ ರಕ್ಷಣೆಯನ್ನು ಹೊಂದಿರುವ ಎರಡು ವಿಭಿನ್ನ ಕೋಟೆಗಳು ರೂಪುಗೊಂಡಿದೆ. ಇದರ ಜೊತೆಗೆ ಕಲ್ಲಿನ ಬೆಟ್ಟಗಳು ಮತ್ತು ನೆಟ್ಟ ಬಿದರುಗಳ ಗುಂಪುಗಳಿಂದ ದಟ್ಟವಾದ ನೈಸರ್ಗಿಕ ಅರಣ್ಯಕ್ಕೆ ಸೇರಲ್ಪಟ್ಟಿವೆ. ಇದನ್ನು ದಾಟಲು ಸಾಧ್ಯವಾಗದೇ ಇರುವುದರಿಂದ ಇದು ತನ್ನದೇ ರಕ್ಷಣೆಯನ್ನು ರೂಪಿಸುತ್ತದೆ. ಈ ದೈತ್ಯ ಬೆಟ್ಟಕ್ಕೆ **'ಸಾವನದುರ್ಗ'** ಅಥವಾ **'ರಾಕ್ ಆಫ್ ಡೆತ್'** ಎಂದು ಕರೆಯುತ್ತಾರೆ.[2] ಇದರ ಬಲದ ಬಗ್ಗೆ ಟಿಪ್ಪು ಹೆಚ್ಚು ವಿಶ್ವಾಸವನ್ನು ಹೊಂದಿದ್ದ. ಆದ್ದರಿಂದ ಈ ಕೋಟೆಯನ್ನು ತನ್ನ ರಕ್ಷಣಾ ಕೇಂದ್ರವಾಗಿ ಮಾಡಿಕೊಂಡನು ಎಂದು ಹೋಂ ತಿಳಿಸುತ್ತಾನೆ.

**ಸಾವನದುರ್ಗ ಕೋಟೆಯ ಚರಿತ್ರೆ**

ಯಲಹಂಕ ನಾಡಪ್ರಭುಗಳಾದ ಇಮ್ಮಡಿ ಕೆಂಪೇಗೌಡನ ಆಳ್ವಿಕೆಯ ಕಾಲದಲ್ಲಿ ಮಾಗಡಿ ಮತ್ತು ಸಾವನದುರ್ಗವನ್ನು ಆಡಳಿತಕ್ಕೆ ಒಳಪಡಿಸಿಕೊಂಡಿದ್ದನು. ನಂತರ ಇಲ್ಲಿ ಮಣ್ಣಿನ ಕೋಟೆಯನ್ನು ನಿರ್ಮಿಸಿದನು. ಮುಂದಿನ ಕಾಲಘಟ್ಟದಲ್ಲಿ ಮೈಸೂರು ರಾಜ ಒಡೆಯರಾದ ಒಂದನೇ ಕೃಷ್ಣರಾಯ ಅಥವಾ ದೊಡ್ಡ ಕೃಷ್ಣರವರು 1730 ರಲ್ಲಿ ಸಾವನದುರ್ಗವನ್ನು ಆಕ್ರಮಿಸಿದರು.

ತದನಂತರ ಹೈದರಾಲಿ ಮೈಸೂರು ರಾಜ್ಯವನ್ನು ತನ್ನ ಅಧಿಕಾರಕ್ಕೆ ತೆಗೆದುಕೊಂಡ ಸಂದರ್ಭದಲ್ಲಿ ಸಾವನದುರ್ಗ ಅವನ ರಕ್ಷಣೆಯ ಕೋಟೆಯಾಗಿತ್ತು. ಮುಂದುವರೆದಂತೆ ಟಿಪ್ಪುವಿನ ಆಳ್ವಿಕೆಯ ಕಾಲಕ್ಕೆ ಸಾವನದುರ್ಗ ಕೋಟೆಯನ್ನು ಇನ್ನಷ್ಟು ದುರಸ್ತಿ ಮತ್ತು ಅಭಿವೃದ್ಧಿಗೊಳಿಸಿ ತನ್ನ ರಾಜ್ಯದ ಸೈನ್ಯ ರಕ್ಷಣಾ ಕೇಂದ್ರವಾಗಿರಿಸಿಕೊಂಡರು.[3]

### ಬ್ರಿಟಿಷರ ಆಕ್ರಮಣದ ಪೂರ್ವ ಯೋಜನೆ

ಮೂರನೇ ಆಂಗ್ಲೋ–ಮೈಸೂರು ಕದನ ನಡೆಯುವ ಸಂದರ್ಭದಲ್ಲಿ ಲಾರ್ಡ್ ಕಾರ್ನ್‌ವಾಲೀಸ್ ಟಿಪ್ಪುವಿನ ಸೈನ್ಯ ಕೇಂದ್ರವಾದ ಸಾವನದುರ್ಗವನ್ನು ಅನಿವಾರ್ಯವಾಗಿ ಆಕ್ರಮಣ ಮಾಡಬೇಕಾಗಿತ್ತು. ಆದ್ದರಿಂದ ಲಾರ್ಡ್ ಕಾರ್ನ್‌ವಾಲೀಸ್ ಆಕ್ರಮಣದ ಪೂರ್ವವಾಗಿ ಕೋಟೆಯ ಸ್ಥಳವನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಮುಖ್ಯ ಇಂಜಿನಿಯರ್‌ಗಳನ್ನು ಕಳುಹಿಸಿದನು. ಆದರೆ ಸಂಪೂರ್ಣವಾಗಿ ಪರೀಕ್ಷಿಸಲಾಗಲಿಲ್ಲ ಕಾರಣ ದಟ್ಟವಾದ ಕಾಡಿನಿಂದ ಕೂಡಿದ್ದರಿಂದ ಪ್ರವೇಶಿಸಲು ಆಗಲಿಲ್ಲ. ಈ ಸ್ಥಳ ಅತ್ಯಂತ ಬಲಿಷ್ಠವಾಗಿದ್ದು ಮೈಸೂರಿನ ಪ್ರದೇಶಗಳಲ್ಲಿಯೇ ಅತ್ಯಂತ ಶಕ್ತಿಶಾಲಿ ಎಂಬ ಖ್ಯಾತಿಗೆ ಪಾತ್ರವಾಗಿತ್ತು. ಒಂದು ಕಾಲದಲ್ಲಿ ಅದನ್ನು ದಾಳಿ ಮಾಡೋದು ಅಸಾಧ್ಯವೆಂದು ಭಾವಿಸಿದ ಲಾರ್ಡ್ ಕಾರ್ನ್‌ವಾಲೀಸ್ ಅದನ್ನು ದಾಳಿ ಮಾಡಲು ನಿರ್ಧರಿಸಿರಲಿಲ್ಲ. ಬೃಹದಾಕಾರದ ಎತ್ತರದ ಬೆಟ್ಟವಾಗಿದ್ದು ಸಾವನದುರ್ಗ ನಂದಿದುರ್ಗಕ್ಕಿಂತ ಹೆಚ್ಚು ಎತ್ತರದಲ್ಲಿದ್ದು ಕನಿಷ್ಠ 8 ಮೈಲಿ ವ್ಯಾಪ್ತಿಯನ್ನು ಹೊಂದಿತ್ತು. ಕೆಳಭಾಗದಿಂದ ಎಲ್ಲೆಡೆ ನೋಡಿದರೂ ಅದು ಅಭೇಧ್ಯವಾಗಿ ಕಾಣುತ್ತಿತ್ತು. ಈ ಬೆಟ್ಟ ಕೋಟೆಗಳಾಗಿ ವಿಭಜಿಸಿದ ಎರಡು ಕಡೆ ನೀರು ಸಮೃದ್ಧವಾಗಿ ಕಂಡು ಬಂದಿತ್ತು. ಅದಕ್ಕಾಗಿಯೇ ಟಿಪ್ಪು ಸುಲ್ತಾನ್ ಇದನ್ನು ಸೇನೆಯ ಮುಖ್ಯ ಕೇಂದ್ರವಾಗಿ ಮಾಡಿಕೊಂಡಿದ್ದ ಜೊತೆಗೆ ಶತ್ರುಗಳ ಸಂಪರ್ಕ ಮಾರ್ಗಗಳನ್ನು ಅಡ್ಡಿಪಡಿಸಲು ಸಹ ಬಳಸಲ್ಪಟ್ಟಿತ್ತು. ಇದರ ಅಸಾಧಾರಣ ಎತ್ತರದಿಂದ ಎರಡು ಪ್ರಮುಖ ರಸ್ತೆಗಳಲ್ಲಿ ಯಾವುದೇ ಸರಕು – ಸಾಗಣೆ ದಳಗಳ ಚಲನವಲನವನ್ನು ಸುಲಭವಾಗಿ ಗಮನಿಸಬಹುದಾಗಿತ್ತು. ಹಾಗಾಗಿ ಲಾರ್ಡ್ ಕಾರ್ನ್‌ವಾಲೀಸ್‌ಗೆ ಇದರ ಮೇಲೆ ದಾಳಿ ಮಾಡುವುದು ಅಸಾಧ್ಯವೆನಿಸಿತ್ತು.[4]

### ಲಾರ್ಡ್ ಕಾರ್ನ್‌ವಾಲೀಸ್ ಸಾವನದುರ್ಗ ದಾಳಿಗೆ ಸೈನ್ಯ ನಿಯೋಜನೆ

ಲಾರ್ಡ್ ಕಾರ್ನ್‌ವಾಲೀಸ್ 1791 ಡಿಸೆಂಬರ್ 10 ರಂದು ಲೆಫ್ಟಿನೆಂಟ್ ಕರ್ನಲ್ ಸ್ಟುವರ್ಟ್‌ನನ್ನು ಸಾವನದುರ್ಗ ಮುತ್ತಿಗೆಗೆ ಆಜ್ಞಾಪಿಸಿದ. ಬೆಟ್ಟದ ಕೆಳಗೆ ಉತ್ತರ ಭಾಗದಿಂದ 3 ಮೈಲಿ ಒಳಗೆ ತನ್ನ ಶಿಬಿರವನ್ನು ಸ್ಥಾಪಿಸಿದನು. ಕರ್ನಲ್ ಸ್ಟುವರ್ಟ್ ಅವರೊಂದಿಗೆ ಲೆಫ್ಟಿನೆಂಟ್ ಕರ್ನಲ್ ನೆಸ್ಬಿಟ್ ನೇತೃತ್ವದಲ್ಲಿ 52 ಮತ್ತು 72ನೇ ರೆಜಿಮೆಂಟ್ ಮತ್ತು ಮೂರು ಬೆಟಾಲಿಯನ್ ಸಿಪಾಯಿಗಳನ್ನು ಒಳಗೊಂಡಂತೆ ಸೈನ್ಯವನ್ನು ಸಿದ್ಧಗೊಳಿಸಿದ ಹಾಗೂ ಫಿರಂಗಿ ದಳದ ತುಕಡಿಯ ಅಧಿಪತ್ಯವಹಿಸಿದ ಮೇಜರ್ ಮಾಂಟಗೂ 4 ಕಬ್ಬಿಣದ 18 ಪೌಂಡರ್ ಫಿರಂಗಿ ಮತ್ತು 4 ಕಬ್ಬಿಣದ 12 ಪೌಂಡರ್ ಇರುವ ಫಿರಂಗಿಗಳನ್ನು ಸೈನ್ಯಕ್ಕೆ ವ್ಯವಸ್ಥೆಗೊಳಿಸಿದನು. ಕೋಟೆಯ ಹಿಂಭಾಗದಲ್ಲಿ ಸುಮಾರು 3 ಮೈಲಿಯ ದೂರದಲ್ಲಿ ಕರ್ನಲ್ ಸ್ಟುವರ್ಟ್ ಸೈನ್ಯ ಬಿಡಾರ ಹೂಡಿತ್ತು. ಲೆಫ್ಟಿನೆಂಟ್ ಕರ್ನಲ್ ಕಾಕರೆಲ್ ಸೈನ್ಯದಳ ಉತ್ತರದ ಶಿವಗಂಗೆ ಕಡೆಗೆ, ಕ್ಯಾಪ್ಟನ್ ವೆಲ್ಷ್ ಎರಡು ಬೆಟಾಲಿಯನ್ ಮಧ್ಯಭಾಗ ಅಥವಾ ಚನ್ನಪಟ್ಟಣದ ರಸ್ತೆಗೆ ಕಡೆಗೆ, ಕ್ಯಾಪ್ಟನ್ ಅಲೆಕ್ಸಾಂಡರ್ ರೀಡ್ ದಕ್ಷಿಣ ಕಡೆಗೆ ನಿಯೋಜಿಸಲಾಯಿತು. ಈ ರೀತಿ ನಾಲ್ಕು ದಿಕ್ಕಿನಲ್ಲಿ ಬ್ರಿಟಿಷರ ಸೈನ್ಯವನ್ನು ವ್ಯವಸ್ಥೆಗೊಳಿಸಿದರು ಎಂಬುದನ್ನು ಮೇಜರ್ ಡಿರಾರ್ಟ್ ತಿಳಿಸುತ್ತಾನೆ.[5]

### ಸಾವನದುರ್ಗ ಕೋಟೆಯ ಮೇಲೆ ಮುತ್ತಿಗೆ

1791 ಡಿಸೆಂಬರ್ 10 ರಂದು ಕರ್ನಲ್ ಸ್ಟುವರ್ಟ್ ತನ್ನ ಶಿಬಿರದಿಂದ ಕಾಡಿನ ಒಳಗಿನಿಂದ ಬೆಟ್ಟದ ಅಡಿಯವರಿಗೂ ಫಿರಂಗಿಗಳನ್ನು ಸಾಗಿಸಲು

ರಸ್ತೆ ಮಾರ್ಗವನ್ನು ಮಾಡುವ ಕೆಲಸವನ್ನು ಆರಂಭಿಸಿದನು. ಇದರ ಜೊತೆಗೆ 24 ಪೌಂಡರ್ ಕಬ್ಬಿಣದ ಫಿರಂಗಿಗಳನ್ನು ಎಳೆಯಬೇಕಾಗಿತ್ತು ತುಂಬಾ ಕಠಿಣ ಶ್ರಮದಿಂದ ರಸ್ತೆಯನ್ನು ನಿರ್ಮಿಸಿದನು.

ಡಿಸೆಂಬರ್ 17 ರಂದು ಸೈನ್ಯವು 700 ಗಜದ ದೂರದಲ್ಲಿದ್ದ ಬೆಟ್ಟದ ಕೆಳಕೋಟೆ ಗೋಡೆಯನ್ನು ಫಿರಂಗಿದಳ ಹಾನಿಗೊಳಿಸಿದವು. 19 ರಂದು 250 ಗಜದ ದೂರದಲ್ಲಿದ್ದ ಬೆಟ್ಟದ ಮೇಲಿನ ಕೋಟೆಯ ಗೋಡೆಯನ್ನು ಬಿರುಕು ಬಿಡುವಂತೆ ಮಾಡಿದರು ನಂತರ 20 ಗಜದ ದೂರದಲ್ಲಿ ಶಿಬಿರವನ್ನು ನಿರ್ಮಿಸಲಾಯಿತು. ಡಿಸೆಂಬರ್ 20 ರ ವೇಳೆಗೆ ಇನ್ನಷ್ಟು ದಾಳಿ ಮಾಡಲು ಸಾಧ್ಯವೆಂದು ನಿರ್ಧರಿಸಲಾಯಿತು.

ಶಿಬಿರದಿಂದ ಸುಮಾರು 7 ಮೈಲಿ ದೂರದಿಂದ ಲಾರ್ಡ್ ಕಾರ್ನ್‌ವಾಲೀಸ್ ದಾಳಿಯನ್ನು ವೀಕ್ಷಿಸಲು ಬಂದಿದ್ದನು. ದಾಳಿಯ ಆರಂಭವಾಗುವಾಗ 71ನೇ ಮತ್ತು 76ನೇ ರೆಜಿಮೆಂಟ್‌ಗಳಿಗೆ ತಮ್ಮ ಸ್ಥಾನಗಳಿಗೆ ಹೋಗಲು ಆದೇಶ ನೀಡಲಾಯಿತು ಮತ್ತು ಟಿಪ್ಪುವಿನ ಸೈನಿಕರು ಈ ಗೋಡೆಯ ಹಿಂದೆ ಇರುವುದನ್ನು ಬ್ರಿಟಿಷ್ ಸೈನಿಕರು ಗಮನಿಸಿದರು. ಈ ಗಮನದಿಂದ ಟಿಪ್ಪುವಿನ ಸೈನ್ಯದ ದಾಳಿಯನ್ನು ತಡೆಯಲು ಸಹಾಯವಾಯಿತು. ಫಿರಂಗಿತೋಪುಗಳನ್ನು ಸಾಕಷ್ಟು ಎತ್ತರಕ್ಕೆ ಸ್ಥಾಪಿಸಿ ಇನ್ನಷ್ಟು ಕಾರ್ಯಚರಣೆಯನ್ನು ನಡೆಸಲಾಯಿತು. ಈ ಕಾರ್ಯಾಚರಣೆ ಸಂಪೂರ್ಣವಾಗಿ ಯಶಸ್ವಿಯಾಗಿದ್ದು, ಗೋಡೆಗಳು ಬಹಳ ದುರ್ಬಲಗೊಂಡಿದೆ ಎಂಬುದು ತಿಳಿಯಿತು. ಫಿರಂಗಿಗಳ ದಾಳಿಗೆ ಕೋಟೆಯ ರಕ್ಷಕರು ಓಡಿಸಲು ಸಾಕಾಗಬಹುದೆಂದು ಕಂಡುಕೊಂಡರು. ಈ ಮಾಹಿತಿಯನ್ನು ಆಧರಿಸಿ ಮರುದಿನದ ದಾಳಿಗೆ ಬ್ರಿಟಿಷ್ ಸೇನೆ ವ್ಯವಸ್ಥೆಯನ್ನು ಮಾಡಿಕೊಂಡಿತ್ತು.[6]

**ಮುತ್ತಿಗೆಯ ಕೊನೆಯ ದಿನ**

ಈ ಬಾರಿ ಲಾರ್ಡ್ ಕಾರ್ನ್‌ವಾಲೀಸ್ ಸೈನ್ಯಕ್ಕೆ ನಿರ್ದೇಶಿಸಿ ದಾಳಿ ಮಾಡಲು ಡಿಸೆಂಬರ್ 21ನೇ ತಾರೀಖು ಬೆಳಿಗ್ಗೆ ಸಮಯವನ್ನು ನಿಗದಿಪಡಿಸಲಾಯಿತು. ಮತ್ತು ಜಯವನ್ನು ನಿರೀಕ್ಷಿಸಲು ಇವರ ಜೊತೆ ಮೆಡೋಸ್ ಕೂಡ ಬಂದನು.

ಕರ್ನಲ್ ನೆಸ್ಬಿಟ್ ನೇತೃತ್ವದಲ್ಲಿ ದಾಳಿ ನಡೆಸಲು ನಾಲ್ಕು ವಿಭಿನ್ನ ದಾಳಿಗಳಿಗೆ ಸನ್ನದರಾದರು. ಪೂರ್ವವನ್ನು 52ನೇ ಮತ್ತು 76ನೇ ರೆಜಿಮೆಂಟ್ ಗ್ರೇನೇಡಿಯರ್‌ಗಳು ಕ್ಯಾಪ್ಟನ್ ಗೇಜ್‌ಗೆ ವಹಿಸಲಾಯಿತು, ಪಶ್ಚಿಮಕ್ಕೆ ಮಾನ್ಸನ್ 71ನೇ ರೆಜಿಮೆಂಟ್ ಸೈನ್ಯಕ್ಕೆ ನೇಮಿಸಲಾಯಿತು. ಕ್ಯಾಪ್ಟನ್ ಲಿಂಡ್ಸ್ ಮತ್ತು ರಾಬರ್ಟ್ ಸನ್ 52ನೇ ಮತ್ತು 72ನೇ ರೆಜಿಮೆಂಟ್ ಸೈನ್ಯವನ್ನು ನಿರ್ದೇಶಿಸಲು ಸೂಚಿಸಲಾಯಿತ್ತು.[7] ಕರ್ನಲ್ ಬೇರ್ಡ್ ಮತ್ತು ಮೇಜರ್ ಪೆಟ್ರಿ ಇವರು ಶತ್ರುಗಳ ಗಮನವನ್ನು ಬೇರೆಡೆ ಸೆಳೆಯಲು ಮತ್ತು ಅವರುಗಳು ತಪ್ಪಿಸಿಕೊಳ್ಳದಂತೆ ತಡೆಯುವ ಜವಾಬ್ದಾರಿಯನ್ನು ನೀಡಿದರು.

ದಾಳಿ ನಡೆಸುವ ಟಿಪ್ಪುವಿನ ಪಡೆಗಳನ್ನು ಗಮನಿಸಲು ಬ್ರಿಟಿಷ್ ಸೈನ್ಯವನ್ನು ಸುಮಾರು 20 ಗಜ ದೂರದಲ್ಲಿ ಇರಿಸಲಾಯಿತು. ಮಧ್ಯಾಹ್ನ 11 ಗಂಟೆಗೆ ಸೂಚನೆ ನೀಡುತ್ತಿದ್ದಂತೆ ದಾಳಿ ಆರಂಭವಾಯಿತು. ಅಲ್ಲಿದ್ದ ಟಿಪ್ಪುವಿನ ಸೈನಿಕರು ತಮ್ಮ ರಕ್ಷಣೆಯ ಸಲುವಾಗಿ ಓಡಲು ಆರಂಭಿಸಿದರು. ಬ್ರಿಟಿಷ್ ಸೈನ್ಯದ ವಿರುದ್ಧ ದಾಳಿ ನಡೆಸಲು ಹೊಸ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕೆ ಅವರಿಗೆ ಸಮಯ ಸಿಗಲಿಲ್ಲ. ಈ ಸಂದರ್ಭದ ಅವಕಾಶ ಕಂಡುಕೊಂಡ ಬ್ರಿಟಿಷ್ ದಾಳಿಕೋರರು ಯಾವುದೇ ತಡೆಯಿಲ್ಲದೆ ಬೆಟ್ಟದ ಮೇಲಕ್ಕೆ ಏರಿದರು. ಪೂರ್ವ ಕೋಟೆ ಸಂಪೂರ್ಣವಾಗಿ ಬ್ರಿಟಿಷರ ಕೈ ವಶವಾಯಿತು. ಬ್ರಿಟಿಷ್ ಸೈನ್ಯ ಶಿಖರವನ್ನು ತಲುಪಿದಾಗ ಕೋಟೆಯನ್ನು ಬಲಪಡಿಸಲು ಬರುತ್ತಿದ್ದ ಒಂದು ದೊಡ್ಡ ಟಿಪ್ಪುವಿನ ಪದಾತಿದಳವನ್ನು ಬ್ರಿಟಿಷರು ಗಮನಿಸಿದರು. ದಾಳಿಯನ್ನು ಅರ್ಧಗಂಟೆ ತಡಮಾಡಿದರೆ ಆಗ ಟಿಪ್ಪುವಿನ ಪಡೆ ಕೋಟೆಯನ್ನು ಪ್ರವೇಶಿಸುತ್ತದೆ ಎಂದು ಮನಗೊಂಡರು. ಆದ್ದರಿಂದ

ಬ್ರಿಟಿಷ್ ಸೈನ್ಯದ ಒಂದು ವಿಭಾಗವನ್ನು ಬಹಳಷ್ಟು ಮೇಲಕ್ಕೆ ಏರಲು ನಂತರ ಬಲಭಾಗಕ್ಕೆ ತಿರುಗುವಂತೆ ಆದೇಶಿಸಲಾಯಿತು. ಟಿಪ್ಪುವಿನ ಸೈನಿಕರು ಹೋಗುವ ಮಾರ್ಗವನ್ನು ಗಮನಿಸಿ ಅವರ ಮಾರ್ಗವನ್ನು ಅನುಸರಿಸುವಂತೆ ಸೂಚಿಸಲಾಯಿತು.

ಕೋಟೆಯ ರಕ್ಷಕರು ಬಳಸುತ್ತಿದ್ದ ಮಾರ್ಗವು ಬೆಟ್ಟದ ಅಂಚಿನ ಮೂಲಕ ಪಶ್ಚಿಮ ಕೋಟೆಗೆ ಹೋಗುತ್ತಿತ್ತು. ಕೋಟೆಯ ಮುಖ್ಯಸ್ಥನಾದ ಕಿಲ್ಲೇದಾರ್ ಪೂರ್ವ ಬೆಟ್ಟದ ಕಡೆಯ ಮೇಲಿನ ರಕ್ಷಕರು ತಮ್ಮ ಸ್ಥಾನಗಳಿಂದ ಓಡಿಸಲ್ಪಟ್ಟಿರುವುದನ್ನು ಗಮನಿಸಿದ. ಬ್ರಿಟಿಷ್ ಸೈನಿಕರು ಕೋಟೆ ಮೇಲ್ಭಾಗಕ್ಕೆ ಏರಲು ಪ್ರಾರಂಭಿಸುವುದನ್ನು ಕಂಡು ಅವರನ್ನು ಪಕ್ಕದಿಂದ ಆಕ್ರಮಣ ಮಾಡಲು ಯತ್ನಿಸಿದನು. ಆದರೆ ಮುಂಚೆಯೇ ಬ್ರಿಟಿಷ್ ಸೈನ್ಯದ ವಿಭಾಗಗಳನ್ನು ಬೆಟ್ಟದ ಮೇಲೆ ನಿಯೋಜಿಸಿದ ಕಾರಣ ಆಕಸ್ಮಿಕವಾಗಿ ಕಿಲ್ಲೇದಾರನಿಗೆ ಎದುರಾದರು. ಅದೇ ಸಮಯದಲ್ಲಿ ಫಿರಂಗಿದಳದಿಂದ ಸಮರ್ಪಕವಾಗಿ ಗುರಿ ಪಡಿಸಿದ ಕೆಲವು ಗುಂಡುಗಳು ಅವನ ಪಡೆಗೆ ಭಾರೀ ಹಾನಿ ಉಂಟು ಮಾಡಿದವು ಹಾಗೂ ಕಿಲ್ಲೇದಾರರನ್ನು ಕೊಲ್ಲಲಾಯಿತು[8]

ಬ್ರಿಟಿಷರು ದಾಳಿ ಆರಂಭಿಸಿದ ಒಂದು ಗಂಟೆ ಒಳಗೆ ಎಲ್ಲಾ ಕಾರ್ಯಗಳು ಪೂರ್ಣಗೊಳಿಸದರು. ಯುದ್ಧದಲ್ಲಿ ಅತ್ಯಂತ ಯಶಸ್ಸು ಬ್ರಿಟಿಷರದಾಗಿತ್ತು. 12 ದಿನಗಳ ಒಳಗೆ ಟಿಪ್ಪುವಿನ ಸೈನ್ಯವನ್ನು ಸೋಲಿಸಲಾಯಿತು. ಐದು ದಿನಗಳ ಫಿರಂಗಿದಳ ದಾಳಿಗೆ ಯಶಸ್ಸು ನೆರವೇರಿತು. ಈ ದಾಳಿಯಲ್ಲಿ ಒಂದೇ ಒಂದು ಬ್ರಿಟಿಷರ ಸೈನಿಕರ ಸಾವು ಸಂಭವಿಸಿರುವುದಿಲ್ಲ. ಈ ರೀತಿಯಾಗಿ ಬ್ರಿಟಿಷರ ಯೋಜನೆಗಳು, ಸುಸಜ್ಜಿತ ಸೇನೆ ಮತ್ತು ಯುದ್ಧೋಪಕರಣಗಳಿಂದ ಜಯವನ್ನು ಸಾಧಿಸಿದರು. ಮುಂದೆ ಡಿಸೆಂಬರ್ 23 ರಂದು ಹುತ್ತರಿ ದುರ್ಗದ ಕಡೆಗೆ ಸೈನ್ಯ ಸಾಗಿತು.[9]

**ಸಾವನದುರ್ಗ ಕೋಟೆ ಮುತ್ತಿಗೆಯ ಮಹತ್ವ**

1. ಸಾವನದುರ್ಗ ಕೋಟೆ ಟಿಪ್ಪುವಿನ ರಕ್ಷಣಾತ್ಮಕವಾದ ಕೋಟೆಯಾಗಿತ್ತು. ಬ್ರಿಟಿಷರ ಗೆಲ್ಲುವಿನಿಂದ ಮೈಸೂರು ರಾಜ್ಯ ರಕ್ಷಣೆಗೆ ಬಲಕುಂದಿತು.
2. ಬ್ರಿಟಿಷರ ಸುಸಜ್ಜಿತ ಸೈನ್ಯಪಡೆ, ಹೊಸ ತಂತ್ರಜ್ಞಾನ ಮತ್ತು ಯುದ್ಧತಂತ್ರಗಾರಿಕೆಯಿಂದ ಈ ಮುತ್ತಿಗೆಯಲ್ಲಿ ಮೇಲುಗೈ ಸಾಧಿಸತ್ತು.
3. ಟಿಪ್ಪುವಿನ ಸೈನಿಕರ ಸೈನ್ಯ ತಂತ್ರಗಾರಿಕೆಯನ್ನು ಬ್ರಿಟಿಷರು ಬುಡಮೇಲು ಮಾಡಿ ಮತ್ತು ಇದರಿಂದ
4. ಭಾರಿ ಸೋಲನ್ನು ಅನುಭವಿಸಬೇಕಾಗಿತ್ತು.
5. ಬ್ರಿಟಿಷರಿಗೆ ಈ ಜಯದಿಂದ ಮುಂದೆ ಹುತ್ತರಿದುರ್ಗ ಮತ್ತು ಶ್ರೀರಂಗಪಟ್ಟಣ ಆಕ್ರಮಣಕ್ಕೆ ಸ್ಫೂರ್ತಿ ದೊರೆಯಿತು.
6. ಈ ದಾಳಿಯಿಂದ ಬ್ರಿಟಿಷ್ ಪಡೆಯನ್ನು ಎದುರಿಸಲು ಟಿಪ್ಪುವಿಗೆ ಇನ್ನಷ್ಟು ಯೋಚನೆ ಮತ್ತು ಯೋಜನೆ ಮಾಡುವಂತೆ ಮಾಡಿತು.

**ಉಪಸಂಹಾರ**

ಒಟ್ಟಾರೆ ಬ್ರಿಟಿಷರ ಬಲಿಷ್ಠ ಸೈನ್ಯದ ನೆರವಿನಿಂದ ಶ್ರೀರಂಗಪಟ್ಟಣದ ಆಕ್ರಮಣದಲ್ಲಿ ಟಿಪ್ಪುವಿನ ರಕ್ಷಣಾ ಕೋಟೆಗಳಾದ ಸಾವನದುರ್ಗ, ಹುತ್ತರಿದುರ್ಗ ಕೋಟೆಗಳು ಬ್ರಿಟಿಷರ ವಶವಾದವು. 1792ರಲ್ಲಿ ಮೂರನೇ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪು ಸೋಲನ್ನು ಅನುಭವಿಸಬೇಕಾಯಿತು. ಬ್ರಿಟಿಷರು ಶ್ರೀರಂಗಪಟ್ಟಣವನ್ನು ಅಕ್ರಮಿಸಿ ಈ ಯುದ್ಧವನ್ನು ಕೊನೆಗೊಳ್ಳಿಸಿದರು.

**ಕೊನೆಟಿಪ್ಪಣಿಗಳು**

1. University of Mysore, *Annual Report of the Mysore Archaeological Department for the Year 1934* (Bangalore: Superintendent at the Government Press, 1936), p. 15.

2. Home, *Select Views in Mysore, the Country of Tippoo Sultan from Drawings Taken on the Spot* (London: Historic Gallery, Pall Mall, 1794), p. 9.
3. *Bangalore Gazetteer* (Bangalore: Government Press, 1875), p. 76.
4. Dirom, *A Narrative of the Campaign in India, Which Terminated the War with Tippoo Sultan in 1792* (London: W. Bulmer & Co., 1793), p. 67.
5. Vibart, H. M. *The Military History of the Madras Engineers and Pioneers, from 1743 up to the Present Time* (Vol. 1). London: W. H. Allen & Co., 1881, p. 243.
6. Dirom, *A Narrative of the Campaign in India, Which Terminated the War with Tippoo Sultan in 1792* (London: W. Bulmer & Co., 1793), p. 70.
7. Moorsom, W. S. *Historical Record of the Fifty-Second Regiment from the Year 1755 to the Year 1858* (Vol. 2). London: Richard Bentley, 1860, p. 44.
8. Wilks, M. *Historical Sketches of the South of India: In an Attempt to Trace the History of Mysoor* (London: Longman, Hurst, Rees, Orme & Brown, 1817), p. 511.
9. Wilson, W. J. *History of the Madras Army* (Vol. 2). Madras: Keys at the Government Press, 1882, p. 218.

**References**


- Branfill, B. R. (1881). On the Savandurga rude stone cemetery, Central Maisur. *The Indian Antiquary, 10*, 1–8.
- Ray, N. B. (1934). *The allies' war with Tipu Sultan, 1790–1793*. The Asiatic Society.
- Rice, B. L. (Ed.). (1905). *Epigraphia Carnatica* (Vol. 9: Bangalore District). Mysore Government Press.
- Smith, J. G. (1893). *Historical record of the Honourable East India Company's First Madras European Regiment*. Warren and Son.